ಕರ್ನಾಟಕ ಸರ್ಕಾರ

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

**HASSAN INSTITUTE OF MEDICAL SCIENCES, HASSAN**

**(An Autonomous Medical Institution, Government of Karnataka )**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699/ 231599**

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

# 6ನೇ ಆರ್ಥಿಕ ಸಮಿತಿ ಸಭೆಯ ನಡವಳಿಗಳು

ದಿನಾಂಕ:18-02-2013ರ ಸೋಮವಾರ,

: ಸ್ಥಳ :

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಸಭಾಂಗಣ ಕೊಠಡಿ,

4ನೇ ಮಹಡಿ, ವಿಧಾನ ಸೌಧ, ಬೆಂಗಳೂರು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699

# 6ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ:18-02-2013ರಂದು, ಸೋಮವಾರ ಪೂರ್ವಾಹ್ನ: 11.00ಗಂಟೆಗೆ ಮಾನ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ, ಬೆಂಗಳೂರು ಮತ್ತು ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ ಇವರ ಘನ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ: 341, ವಿಧಾನ ಸೌಧ, ಬೆಂಗಳೂರು, ಇಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 6ನೇ ಆರ್ಥಿಕ ಸಮಿತಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಆರ್ಥಿಕ ಸಮಿತಿ ಸದಸ್ಯರ ಸಂಖ್ಯೆ:09** **ಹಾಜರಿದ್ದ ಸದಸ್ಯರ ಸಂಖ್ಯೆ:08**

## ಸಭೆಯಲ್ಲಿ ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು

| | | | |
|---|---|---|---|
| 1 | ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ವಿಧಾನ ಸೌಧ, ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 2 | ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 3 | ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 4 | ಸರ್ಕಾರದ ಅಪರ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ವಿಕಾಸ ಸೌಧ, ಬೆಂಗಳೂರು. | ಸದಸ್ಯರು | -- |
| 5 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 6 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 7 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 8 | ಪ್ರಾಂಶುಪಾಲರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 9 | ಆರ್ಥಿಕ ಸಲಹೆಗಾರರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

Finanee Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರ .ಸಂಖ್ಯೆ | ವಿಷಯಗಳು | ತೀರ್ಮಾನ |
|---|---|---|
| 1 | 6ನೇ ಆರ್ಥಿಕ ಸಮಿತಿ ಸಭೆಯ ಸಭಾ ಆಹ್ವಾನ ಪತ್ರವನ್ನು ಓದಿ ರೆಕಾರ್ಡ್ ಮಾಡುವುದು. | 6ನೇ ಆರ್ಥಿಕ ಸಮಿತಿ ಸಭೆಯ ಸಭಾ ಆಹ್ವಾನ ಪತ್ರವನ್ನು ಓದಿ ರೆಕಾರ್ಡ್ ಮಾಡಲಾಯಿತು. |
| 2 | ದಿನಾಂಕ:22-02-2011 ರಂದು ನಡೆದ 5ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳ ಪಾಲನಾ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ:22-02-2011 ರಂದು ನಡೆದ 5ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳ ಪಾಲನಾ ವರದಿಯನ್ನು ಓದಿ ಅಂಗೀಕರಿಸಲಾಯಿತು. |
| 3 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2006-07ನೇ ಸಾಲಿನಿಂದ 2010-11ನೇ ಸಾಲಿನವರೆಗೆ ಮಹಾಲೇಖಪಾಲಕರು, ಕರ್ನಾಟಕ ವೃತ್ತ, ಬೆಂಗಳೂರು. ಇವರಿಂದ ಲೆಕ್ಕ ಪರಿಶೋಧನೆಯಾಗಿದ್ದು ಸದರಿ ಆಡಿಟ್ ವರದಿಯಲ್ಲಿ ಪ್ರಸ್ತಾವಿತವಾದ ಲೆಕ್ಕಪತ್ರ ನಿರ್ವಹಣೆಗೆ ಸಂಬಂಧಿಸಿದ ಆಕ್ಷೇಪಣೆಗಳು ವಸೂಲಾತಿಗಳು ಮತ್ತು ನ್ಯೂನತೆಗಳ ಬಗ್ಗೆ ನೀಡಿರುವ ಅನುಪಾಲನ ವರದಿಯನ್ನು ಅನುಮೋದಿಸುವುದು. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2006-07ನೇ ಸಾಲಿನಿಂದ 2010-11ನೇ ಸಾಲಿನವರೆಗೆ ಮಹಾಲೇಖಪಾಲಕರು, ಕರ್ನಾಟಕ ವೃತ್ತ, ಬೆಂಗಳೂರು. ಇವರಿಂದ ಲೆಕ್ಕ ಪರಿಶೋಧನೆಯಾಗಿದ್ದು ಸದರಿ ಆಡಿಟ್ ವರದಿಯಲ್ಲಿ ಪ್ರಸ್ತಾವಿತವಾದ ಲೆಕ್ಕಪತ್ರ ನಿರ್ವಹಣೆಗೆ ಸಂಬಂಧಿಸಿದ ಆಕ್ಷೇಪಣೆಗಳು ವಸೂಲಾತಿಗಳು ಮತ್ತು ನ್ಯೂನತೆಗಳ ಬಗ್ಗೆ ನೀಡಿರುವ ಅನುಪಾಲನ ವರದಿಯನ್ನು ಓದಿ ಅಂಗೀಕರಿಸಲಾಯಿತು.<br>* ಮಹಾಲೇಖಪಾಲಕರ ವರದಿ Part-II ಕ್ರಮ ಸಂಖ್ಯೆ(1)ರಲ್ಲಿ ಆಸ್ಪತ್ರೆಯ ಯೂಸರ್ಸ್ ನಿಧಿಯ ಹಣಕಾಸಿನ ವ್ಯವಹಾರವನ್ನು ಸಂಸ್ಥೆಯ ನಿರ್ದೇಶಕರ ಮುಖಾಂತರ ನಿರ್ವಹಿಸುವಂತೆ ಸೂಚಿಸಿರುವುದರಿಂದ ಕೂಡಲೇ ಈ ಬಗ್ಗೆ ಕ್ರಮಕೈಗೊಳ್ಳುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು. |
| 4 | 2010-11 ಮತ್ತು 2011-12ನೇ ಸಾಲಿನ ಸಂಸ್ಥೆಯ ಅಂತರೀಕ ಲೆಕ್ಕ ಪರಿಶೋಧನಾ ವರದಿಯನ್ನು ಓದಿ ಅಂಗೀಕರಿಸುವುದು. | 2010-11 ಮತ್ತು 2011-12ನೇ ಸಾಲಿನ ಸಂಸ್ಥೆಯ ಲೆಕ್ಕ ಪರಿಶೋಧನೆಯನ್ನು ಅಂತರೀಕ ಲೆಕ್ಕ ಪರಿಶೋಧಕರಿಂದ (ಚಾರ್ಟೆಡ್ ಅಕೌಂಟೆಂಟ್) ಪರಿಶೀಲನೆಗೆ ಒಳಪಡಿಸಿದ್ದು ಸದರಿಯವರು ನೀಡಿರುವ ಲೆಕ್ಕಪತ್ರ ವರದಿಯನ್ನು ಓದಿ ಅಂಗೀಕರಿಸಲಾಯಿತು. |
| 5 | 2011-12ನೇ ಸಾಲಿನಲ್ಲಿ ಸಂಸ್ಥೆಗೆ ಹೊರಗುತ್ತಿಗೆ ಆಧಾರದಲ್ಲಿ ಭದ್ರತಾ ಸಿಬ್ಬಂದಿ ಮತ್ತು ಸ್ವಚ್ಛತಾ ಸಿಬ್ಬಂದಿಯವರ ಸೇವೆ ನೀಡಿರುವ ಸಾಯಿ ಸೆಕ್ಯೂರಿಟಿಸ್ ಇವರು ಡಿಸೆಂಬರ್-2011 ರಿಂದ ಡಿಸೆಂಬರ್-2012 ರವರೆಗೆ ಬಿಲ್ ಪಾವತಿಸಲು | ಅ) ಮೆ॥ ಸಾಯಿ ಸೆಕ್ಯೂರಿಟಿ ಏಜೆನ್ಸಿಸ್‌ರವರ ಪರವಾಗಿ ಹಿಮ್ಸ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ವೇತನ ಪಾವತಿಯ ಮೊತ್ತದ ನ್ಯೂನ್ಯತೆಯ ಬಗ್ಗೆ ಕಾರ್ಮಿಕರ ಇಲಾಖೆಗೆ ಮತ್ತು ಭವಿಷ್ಯ ನಿಧಿ(ಇ.ಪಿ.ಎಫ್) ವಂತಿಕೆ ಪಾವತಿ ಬಗ್ಗೆ ಭವಿಷ್ಯ ನಿಧಿ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದು ಸದರಿ ಪ್ರಕರಣಗಳು |

T. V. Nataraj
Finanee Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂಖ್ಯೆ | ವಿಷಯಗಳು | ತೀರ್ಮಾನ |
|---|---|---|
| | ಕೋರಿ ಸಲ್ಲಿಸಿರುವ ಪತ್ರದ ಬಗ್ಗೆ. | ಇತ್ಯಾರ್ಥವಾಗದೆ ಬಾಕಿ ಉಳಿದಿರುತ್ತದೆ.<br>ಆ) ಮೂಲ ಕರಾರು ಒಪ್ಪಂದದಲ್ಲಿದಂತೆ ಮೆ॥ ಸಾಯಿ ಸೆಕ್ಯೂರಿಟಿಸ್ ಏಜೆನ್ಸಿಸ್‌ರವರು ಪ್ರತಿ ತಿಂಗಳು ನಿಯಮಿತವಾಗಿ ಬಿಲ್‌ನ್ನು ಸಲ್ಲಿಸದೆ ಏಕಕಾಲದಲ್ಲಿ ಒಂದು ವರ್ಷದ ಬಿಲ್ಲುಗಳನ್ನು(ಡಿಸೆಂಬರ್-2011 ರಿಂದ ಡಿಸೆಂಬರ್-2012) ಸಲ್ಲಿಸಿದ್ದು ಈ ಬಿಲ್‌ಗಳಿಗೆ ವೈದ್ಯಕೀಯ ಅಧೀಕ್ಷರು, ಮತ್ತು ನಿರ್ದೇಶಕರು, ಹಿಮ್ಸ್, ಹಾಸನ ಇವರಿಂದ ತೃಪ್ತಿಕರ ದೃಢೀಕರಣ ಪಡೆದು ಕೊಂಡಿರುವುದಿಲ್ಲ.<br>ಇ) ಮೆ॥ ಸಾಯಿ ಸೆಕ್ಯೂರಿಟೀಸ್ ಏಜೆನ್ಸಿಸ್ ರವರು 2012-13ನೇ ಸಾಲಿನ ಟೆಂಡರ್ ಪ್ರಕ್ರಿಯೆಯನ್ನು ಪ್ರಶ್ನಿಸಿ ಘನ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿ ಮಧ್ಯಾಂತರ ತಡೆಯಾಜ್ಞೆ ತಂದಿರುತ್ತಾರೆ.<br>ಮೇಲ್ಕಂಡ ಎಲ್ಲಾ ವಿಷಯಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಕಾರ್ಮಿಕ ಇಲಾಖೆ, ನೌಕರರ ಭವಿಷ್ಯನಿಧಿ ಇಲಾಖೆ, ಘನ ಉಚ್ಚನ್ಯಾಯಾಲಯದ ಅಂತಿಮ ತೀರ್ಮಾನ ಪ್ರಕಟವಾಗುವವರೆಗೂ ಸದರಿ ಏಜೆನ್ಸಿಸ್‌ರವರ ಬಿಲ್ ಬಾಬ್ತನ್ನು ತಡೆ ಹಿಡಿದು ಸಂಬಂಧಿಸಿದ ಇಲಾಖೆಗಳಿಂದ ಅಂತಿಮ ತೀರ್ಮಾನ ಪ್ರಕಟಣೆಗೊಂಡ ನಂತರ ವೇತನ ಬಿಲ್ ಪಾವತಿ ಬಗ್ಗೆ. ಅಗತ್ಯ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು. |
| 6 | 2012-13ನೇ ಸಾಲಿಗೆ ಒಂದು ವರ್ಷದ ಅವಧಿಗೆ ಹೊರ ಗುತ್ತಿಗೆ ಆಧಾರದಲ್ಲಿ ಭದ್ರತಾ ಸಿಬ್ಬಂದಿ ಮತ್ತು ಸ್ವಚ್ಚತಾ ಸಿಬ್ಬಂದಿಯವರನ್ನು ಸೇವೆ ಪಡೆಯಲು ಕರೆದಿರುವ ಇ-ಟೆಂಡರ್ ಅನುಮೋದನೆಯ ಬಗ್ಗೆ. | ಮೆ.ಸಾಯಿ ಸೆಕ್ಯೂರಿಟೀಸ್ ಏಜೆನ್ಸಿಸ್ ಇವರು 2012-13ನೇ ಸಾಲಿನ ಟೆಂಡರ್ ಪ್ರಕ್ರಿಯೆಯನ್ನು ಪ್ರಶ್ನಿಸಿ ಘನ ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ದಾಖಲಿಸಿ ಮಧ್ಯಾಂತರ ತಡೆಯಾಜ್ಞೆ ತಂದಿರುವುದರ ಬಗ್ಗೆ ಚರ್ಚಿಸಲಾಯಿತು. 2012-13ಸಾಲಿನ ವರ್ಷವು ಪೂರ್ಣಗೊಂಡು 2013-14ನೇ ಸಾಲು ಪ್ರಾರಂಭವಾಗುತ್ತಿರುವುದರಿಂದ 2012-13ನೇ ಸಾಲಿನಲ್ಲಿ ಕರೆಯಲಾಗಿದ್ದ ಇ-ಟೆಂಡರ್ ಪ್ರಕ್ರಿಯೆಯನ್ನು ಹಿಂಪಡೆಯಲು ತೀರ್ಮಾನಿಸಿ ಸಂಸ್ಥೆಯ ವಕೀಲರೊಂದಿಗೆ ಚರ್ಚಿಸಿ, ಮೆ.ಸಾಯಿ ಸೆಕ್ಯೂರಿಟೀಸ್ ಏಜೆನ್ಸಿಸ್‌ರವರು ತಂದಿರುವ ತಡೆಯಾಜ್ಞೆಯನ್ನು ತೆರೆವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವುದೆಂದು |



T.V. N[illegible]
Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ .ಸಂಖ್ಯೆ | ವಿಷಯಗಳು | ತೀರ್ಮಾನ |
|---|---|---|
| | | ತೀರ್ಮಾನಿಸಲಾಯಿತು. ಹಾಗೂ 2013–14ನೇ ಸಾಲಿಗೆ ಹೊಸದಾಗಿ ಇ–ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸೂಕ್ತ ಕ್ರಮ ವಹಿಸುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು. |
| 7 | ಸಂಸ್ಥೆಯ ಬೋಧಕ ಸಿಬ್ಬಂದಿಯವರ ವಸತಿಗೃಹಗಳಿಗೆ ಸಿಬ್ಬಂದಿಯವರ ವೇತನದಿಂದ ಕಡಿತಗೊಳಿಸಿರುವ ಮನೆಬಾಡಿಗೆ ಭತ್ಯೆ ಹಾಗೂ ನಿರ್ವಾಹಣಾ ಮೊತ್ತದಲ್ಲಿ ಘಟನೋತ್ತರ ನಿರೀಕ್ಷಣೆ ಮೇರೆಗೆ ಜನರೇಟರ್ ಸೌಲಭ್ಯ ಅಳವಡಿಸಿದ್ದು ಸದರಿ ಅಳವಡಿಕೆಯ ಬಿಲ್ ಬಾಬ್ತಿಗೆ ಅನುಮೋದನೆ ನೀಡುವ ಬಗ್ಗೆ. | ಸಂಸ್ಥೆಯ ವಸತಿ ಗೃಹಗಳ ಲಿಫ್ಟ್‌ಗಳಿಗೆ ವಿದ್ಯುತ್ ವ್ಯತ್ಯಾಯವಾದಾಗ ಜನರೇಟರ್ ಬಳಸಿಕೊಳ್ಳುವ ವ್ಯವಸ್ಥೆಯನ್ನು ಈಗಾಗಲೇ ಕಲ್ಪಿಸಲಾಗಿರುತ್ತದೆ. ಆದರೆ ವಸತಿಗೃಹಗಳಲ್ಲಿ ವಾಸಿಸುತ್ತಿರುವ ಸಿಬ್ಬಂದಿಯವರ ವಸತಿ ಗೃಹಗಳಿಗೆ ಜನರೇಟರ್ ಸೌಲಭ್ಯವನ್ನು ಅಳವಡಿಸಿರುವುದಿಲ್ಲ ಜನರೇಟರ್ ಸೌಕರ್ಯವನ್ನು ಅಳವಡಿಸಿಕೊಡುವಂತೆ ಸಿಬ್ಬಂದಿ ವರ್ಗದವರು ಕೋರಿರುವುದರಿಂದ **ಎಲ್ಲಾ ವಸತಿಗೃಹ ಕಟ್ಟಡಗಳಿಗೆ ಜನರೇಟರ್‌ನಿಂದ ವಿದ್ಯುತ್ ಸಂಪರ್ಕವನ್ನು ಒದಗಿಸಲು ವೈರಿಂಗ್ ಮತ್ತು ಕಂಟ್ರೋಲ್ ಪ್ಯಾನಲ್ ಅಳವಡಿಸುವ ಕೆಲಸವನ್ನು ಲೋಕೋಪಯೋಗಿ ಇಲಾಖೆ ಮೂಲಕ ರೂ.6,90,000.00 ಅಂದಾಜು ಪಟ್ಟಿಯನ್ನು ಪಡೆಯಲಾಗಿರುತ್ತದೆ.** ಈ ಅಳವಡಿಕೆಯು ಅವಶ್ಯಕವಾಗಿರುವುದರಿಂದ ಘಟನೋತ್ತರ ನಿರೀಕ್ಷಣಾ ಮೇರೆಗೆ ಅಳವಡಿಸಿ ಬಿಲ್ಲು ಬಾಬ್ತು ರೂ.6,88,600–00ಗಳನ್ನು ಶ್ರೀ ಕೃಷ್ಣ ಎಲೆಕ್ಟ್ರಿಕಲ್ಸ್, ಕ್ಲಾಸ್–1 ಕಂಟ್ರಾಕ್ಟರ್, ಹಾಸನರವರಿಗೆ ಪಾವತಿಸಲಾಗಿದೆ. ಸಿಬ್ಬಂದಿಯವರಿಂದ ಮನೆಬಾಡಿಗೆ ಮೊತ್ತವಾಗಿ ಆಗಸ್ಟ್–2008 ರಿಂದ ಡಿಸೆಂಬರ್–2012 ರವರೆಗೆ ರೂ.42,13,839.00ಗಳು ಮತ್ತು ನಿರ್ವಾಹಣಾ ವೆಚ್ಚದ ಮೊತ್ತವಾಗಿ ರೂ.18,23,000.00 ಒಟ್ಟು ರೂ.60,36,839.00 ಸಂಗ್ರಹವಾಗಿರುತ್ತದೆ ಈ ಅಳವಡಿಕೆಯ ವೆಚ್ಚವನ್ನು ವಸತಿಗೃಹದಲ್ಲಿ ವಾಸವಿರುವ ಸಿಬ್ಬಂದಿಯ ಮನೆ ಬಾಡಿಗೆ ಭತ್ಯೆ ಮತ್ತು ನಿರ್ವಹಣಾ ವೆಚ್ಚದಲ್ಲಿ ಭರಿಸಿರುವುದರಿಂದ ಒಪ್ಪಿ ಅಂಗೀಕರಿಸಲಾಯಿತು. |
| 8 | ಸಂಸ್ಥೆಯ ಬೋಧಕ ಸಿಬ್ಬಂದಿಯವರ ವಸತಿ ಗೃಹದ ಸ್ಥಳದಲ್ಲಿ ವಾಹನ ನಿಲುಗಡೆಗೆ (ಕಾರ್‌ಷೆಡ್) ಸ್ಥಳವಕಾಶ ಮಾಡಿಕೊಡಲು ಷೆಡ್ ನಿರ್ಮಾಣ ಮಾಡುವ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಸತಿಗೃಹಗಳಲ್ಲಿ ವಾಸಿಸುತ್ತಿರುವ ಸಿಬ್ಬಂದಿ ವರ್ಗದವರು ವಸತಿಗೃಹದ ಸಂಕೀರ್ಣದ ಹಿಂಭಾಗದಲ್ಲಿ ನಾಲ್ಕು ಚಕ್ರ ವಾಹನ ನಿಲುಗಡೆಗಾಗಿ ಶೆಲ್ಟರ್ ನಿರ್ಮಿಸಿಕೊಡುವಂತೆ |

T.N.N.
Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರ .ಸಂಖ್ಯೆ | ವಿಷಯಗಳು | ತೀರ್ಮಾನ |
|---|---|---|
| | ಕಾಮಗಾರಿಯ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡುವ ಬಗ್ಗೆ. | ಕೋರಿರುವುದರಿಂದ ವಸತಿ ಸಂಕೀರ್ಣದ ಹಿಂಭಾಗದಲ್ಲಿ ವಾಹನ ನಿಲುಗಡೆಗೆ ಗ್ಯಾಲೋನಿಯಂ ಶೀಟ್‌ನಿಂದ ಶೆಲ್ಟರ್ ನಿರ್ಮಿಸಿ ನೆಲಹಾಸಿಗೆ ಕಾಂಕ್ರೀಟನ್ನು ಅಳವಡಿಸುವ ಕಾಮಗಾರಿಗೆ ಅಗತ್ಯವಾದ ಅನುವುಗಳನ್ನು ಅಳವಡಿಸಿಕೊಳ್ಳುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆ, ಹಾಸನ ವೃತ್ತ, ಹಾಸನರವರ ದರಪಟ್ಟಿಯಂತೆ ರೂ.4.98 ಮತ್ತು ರೂ.4.95 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ವರದಿ ಸಲ್ಲಿಸಿರುತ್ತಾರೆ. ಈ ಕಾಮಗಾರಿಯ ವೆಚ್ಚವನ್ನು ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ಸಿಬ್ಬಂದಿಯ ವೇತನದಲ್ಲಿ ಕಟಾಯಿಸಿರುವ ಮನೆ ಬಾಡಿಗೆ ಭತ್ಯೆ ಮತ್ತು ನಿರ್ವಹಣಾ ಮೊತ್ತದಲ್ಲಿ ಭರಿಸಲು ತೀರ್ಮಾನಿಸಿರುವುದರಿಂದ ಸದರಿ ಕಾಮಗಾರಿ ಮತ್ತು ವೆಚ್ಚವನ್ನು ಒಪ್ಪಿ ಅಂಗೀಕರಿಸಲಾಯಿತು. |
| 9 | ಸಂಸ್ಥೆಯ ಕಾಲೇಜು ಕಟ್ಟಡದ 5ನೇ ಅಂತಸ್ತಿನ ಪರೀಕ್ಷಾ ಕೊಠಡಿಗಳಿಗೆ ಬಣ್ಣ ಬಳಿಸಿರುವ ಕಾಮಗಾರಿಗೆ ಅನುಮೋದನೆ ಪಡೆಯುವ ನೀಡುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಕಟ್ಟಡದ 5ನೇ ಅಂತಸ್ತಿನಲ್ಲಿರುವ ಪರೀಕ್ಷಾ ಕೊಠಡಿಗಳಿಗೆ ಬಣ್ಣ ಬಳಿಯಲು ಪರೀಕ್ಷಾ ವಿಭಾಗದ ಮೇಲ್ವಿಚಾರಕರು, ಮನವಿ ಸಲ್ಲಿಸಿದ್ದು, ಅದರಂತೆ ಲೋಕೋಪಯೋಗಿ ಇಲಾಖೆಯಿಂದ ಸ್ಥಳ ಪರಿಶೀಲಿಸಿ ರೂ.2.39 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಪಡೆದು ಘಟನ್ನೋತ್ತರ ನಿರೀಕ್ಷಣಾ ಮೇರೆಗೆ ಬಣ್ಣ ಬಳಿಯುವ ಕೆಲಸವನ್ನು ಪೂರ್ಣಗೊಳಿಸಲಾಗಿರುತ್ತದೆ. ಈ ವೆಚ್ಚವನ್ನು ಒಪ್ಪಿ ಅನುಮೋದನೆ ನೀಡಲಾಯಿತು. |
| 10 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಮ್ಯಾನಿಪೋಲ್ಡ್ ಕೊಠಡಿಯಲ್ಲಿ ನೆಲಹಾಸು ದುರಸ್ತಿ ಕಾಮಗಾರಿಯ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡುವ ಬಗ್ಗೆ. | ಬೋಧಕ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಮ್ಯಾನಿಪೋಲ್ಡ್ ಕೊಠಡಿಯಲ್ಲಿನ ನೆಲಹಾಸು ಕಿತ್ತು ಬಂದಿದ್ದು ಗ್ಯಾಸ್ ಸಿಲಿಂಡರ್‌ಗಳನ್ನು ಇಡಲು ತೊಂದರೆಯಾಗಿದ್ದು, ಸದರಿ ನೆಲಹಾಸನ್ನು ದುರಸ್ತಿಗೊಳಿಸಲು ಜಿಲ್ಲಾ ಶಸ್ತ್ರ ಚಿಕಿತ್ಸಕರು /ವೈದ್ಯಕೀಯ ಅಧೀಕ್ಷಕರು, ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ ರವರ ಪತ್ರ ಸಂ.ಎಸ್.ಸಿ.ಹೆಚ್./ಅಭಿ/1/12-13,ದಿನಾಂಕ:18-10-2012ರಲ್ಲಿ ಕೋರಿರುತ್ತಾರೆ. ಅದರಂತೆ ಸದರಿ ನೆಲಹಾಸನ್ನುಕಿತ್ತು ತೆಗೆದು ಹೊಸದಾಗಿ ನೆಲಹಾಸನ್ನು ಮಾಡುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆ, ಹಾಸನ ವೃತ್ತ, ಹಾಸನರವರು |

T.V.N...
Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ .ಸಂಖ್ಯೆ | ವಿಷಯಗಳು | ತೀರ್ಮಾನ |
|---|---|---|
| | | ರೂ.85,000–00 ಗಳಿಗೆ ಅಂದಾಜುಪಟ್ಟಿ ನೀಡಿದ್ದು ಘಟನೋತ್ತರ ನಿರೀಕ್ಷಣಾ ಮೇರೆಗೆ ಕೆಲಸವನ್ನು ಪೂರ್ಣಗೊಳಿಸಲಾಗಿರುತ್ತದೆ. ಈ ವೆಚ್ಚವನ್ನು ಒಪ್ಪಿ ಅನುಮೋದನೆ ನೀಡಲಾಯಿತು. |
| 11 | 2011–12 ಮತ್ತು 2012–13 ರವರೆಗೆ (ದಿನಾಂಕ: 31–12–2012 ರವರೆಗೆ)ಬೋಧಕ ಆಸ್ಪತ್ರೆ ಮತ್ತು ಕಾಲೇಜಿನ ವಿವಿಧ ವಿಭಾಗಗಳಿಗೆ ಘಟನ್ನೋತ್ತರ ನಿರೀಕ್ಷಣೆಯ ಮೇರೆಗೆ ಖರೀದಿಸಿರುವ ಉಪಕರಣಗಳು/ ಪಿಠೋಪಕರಣಗಳು/ ಔಷಧಿಗಳು/ರಾಸಾಯನಿಕಗಳು/ ಸಣ್ಣಪುಟ್ಟ ಕಾಮಗಾರಿಗಳು/ ಸ್ಟೇಷನರಿ ಮತ್ತು ಮುದ್ರಣ/ ಎ.ಎಮ್.ಸಿ./ ಸಿ.ಎಮ್.ಸಿ./ ಗ್ರಂಥಾಲಯ ಪುಸ್ತಕಗಳ ಖರೀದಿ/ ಉಪಕರಣಗಳ ರಿಪೇರಿಗಳು/ವಾಹನಗಳ ರಿಪೇರಿ ಹಾಗೂ ಇತರೆ ಸಾಮಗ್ರಿಗಳ ಖರೀದಿಯ ವೆಚ್ಚದ ಪಟ್ಟಿಗೆ ಅನುಮೋದನೆ ಪಡೆಯುವ ಬಗ್ಗೆ. | 011–12 ಮತ್ತು 2012–13 ರವರೆಗೆ (ದಿನಾಂಕ: 31–12–2012ರವರೆಗೆ)ಬೋಧಕ ಆಸ್ಪತ್ರೆ ಮತ್ತು ಕಾಲೇಜಿನ ವಿವಿಧ ವಿಭಾಗಗಳಿಗೆ ಘಟನ್ನೋತ್ತರ ನಿರೀಕ್ಷಣೆಯ ಮೇರೆಗೆ ಖರೀದಿಸಿರುವ ಉಪಕರಣಗಳು/ ಪಿಠೋಪಕರಣಗಳು/ ಔಷಧಿಗಳು/ ರಾಸಾಯನಿಕಗಳು/ಸಣ್ಣಪುಟ್ಟ ಕಾಮಗಾರಿಗಳು/ ಸ್ಟೇಷನರಿ ಮತ್ತು ಮುದ್ರಣ/ ಎ.ಎಮ್.ಸಿ./ಸಿ.ಎಮ್.ಸಿ./ ಗ್ರಂಥಾಲಯ ಪುಸ್ತಕಗಳ ಖರೀದಿ/ ಉಪಕರಣಗಳ ರಿಪೇರಿಗಳು /ವಾಹನಗಳ ರಿಪೇರಿ ಹಾಗೂಇತರೆ ಸಾಮಗ್ರಿಗಳ ಖರೀದಿಯ ವೆಚ್ಚದ ಪಟ್ಟಿಗೆ ಅನುಮೋದನೆ ಬಗ್ಗೆ ಚರ್ಚಿಸಲಾಗಿ ವೆಚ್ಚದ ಬಗ್ಗೆ ಸಮಗ್ರವಾಗಿ ಕಡತಗಳನ್ನು ಪರಿಶೀಲಿಸಬೇಕಾಗಿರುವುದರಿಂದ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು. |
| 12 | ಸಂಸ್ಥೆಯ ಅಧೀನದಲ್ಲಿರುವ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಹಾಸನ ಇಲ್ಲಿಗೆ 62.5 ಕೆ.ವಿ. ವಿದ್ಯುತ್ ಜನರೇಟರ್ ಖರೀದಿಸಿ ಅಳವಡಿಸುವ ಬಗ್ಗೆ. | ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಹಾಸನ ಇಲ್ಲಿಗೆ ವಿಶ್ವವಿದ್ಯಾಲಯದ ಪರೀಕ್ಷೆ ವೇಳೆಯಲ್ಲಿ ನಿರಂತರ ವಿದ್ಯುತ್ ಸರಬರಾಜು ಅಗತ್ಯ ಇರುವುದರಿಂದ ಹಾಗೂ ರಾತ್ರಿ ವೇಳೆಯಲ್ಲಿ ವಿದ್ಯಾರ್ಥಿನಿಲಯಗಳಿಗೆ ವಿದ್ಯುತ್ ನಿಲುಗಡೆ ಸಮಯದಲ್ಲಿ ವಿದ್ಯುತ್ ಸರಬರಾಜು ಅಗತ್ಯ ಇರುವುದರಿಂದ 62.5 ಕೆ.ವಿ. ವಿದ್ಯುತ್ ಜನರೇಟರ್ ಅನ್ನು ಡಿ.ಜಿ.ಎಸ್.& ಡಿ ದರದಲ್ಲಿ ಖರೀದಿಸಿಕೊಡುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ದಿನಾಂಕ: 19–08–2012ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಅಜೆಂಡಾ ಕ್ರಮ ಸಂಖ್ಯೆ :15ರಲ್ಲಿ ಚರ್ಚಿಸಲಾಗಿದ್ದು ವಿಷಯವನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ನಂತರ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. ಇದರಂತೆ ಮೆ॥Kirloskar ಕಂಪನಿಯ ಮಾಡೆಲ್ ಸಂಖ್ಯೆ: 4R1040T, BHP 83 ಪವರ್ ಜನರೇಟರ್ ಖರೀದಿಸಲು |



T.V. Nataraj
Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

| ಅಜೆಂಡಾ ಕ್ರ .ಸಂಖ್ಯೆ | ವಿಷಯಗಳು | ತೀರ್ಮಾನ |
|---|---|---|
| | | ತೆರಿಗೆ ಸೇರಿದಂತೆ ರೂ.7,12,986.00 ರೂಗಳ ಅಂದಾಜು ಮೊತ್ತಕ್ಕೆ ಒಪ್ಪಿ ಅನುಮೋದಿಸಲಾಯಿತು. |
| 13 | ಸಂಸ್ಥೆಯ ಕಾಲೇಜು ಕಟ್ಟಡದ ನಾಲ್ಕನೇ ಮಹಡಿಯಲ್ಲಿರುವ ಉಪನ್ಯಾಸಕ ಕೊಠಡಿಗೆ ಅಕಾಸ್ಟಿಕ್ ಮತ್ತು ಫಾಲ್ಸ್‌ಸೀಲಿಂಗ್ ಅಕಾಸ್ಟಿಕ್ ಅಳವಡಿಸುವ ಕಾಮಗಾರಿ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಕಟ್ಟಡದ ನಾಲ್ಕನೇ ಮಹಡಿಯಲ್ಲಿರುವ ಉಪನ್ಯಾಸಕ ಕೊಠಡಿಗೆ ಅಕಾಸ್ಟಿಕ್ ಮತ್ತು ಫಾಲ್ಸ್ ಸೀಲಿಂಗ್ ಅಕಾಸ್ಟಿಕ್ ಅಳವಡಿಸುವ ಅಂದಾಜು ಪಟ್ಟಿ ನೀಡಲು ನಿರ್ದೇಶಕರು, ಹಿಮ್ಸ್, ಹಾಸನರವರು ಮೌಖಿಕವಾಗಿ ಲೋಕೋಪಯೋಗಿ ಇಲಾಖೆಗೆ ಕೋರಿರುತ್ತಾರೆ. ಅದರಂತೆ ದಿನಾಂಕ: 22–01–2013ರಂದು ನಿರ್ದೇಶಕರು, ಹಿಮ್ಸ್, ಹಾಸನರವರೊಡನೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಪ್ರಧಾನ ಮುಖ್ಯ ವಾಸ್ತು ಶಿಲ್ಪಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅನುಮೋದಿತ ನಕ್ಷೆಯನ್ನು ನೀಡಿದ್ದು (DRG:No.11517/1-3) ಅದರಂತೆ ಸದರಿ ಕಾಮಗಾರಿಗೆ ರೂ.45.00 ಲಕ್ಷಗಳಿಗೆ ದರಪಟ್ಟಿ ತಯಾರಿಸಿ ಸಲ್ಲಿಸಿರುವುದನ್ನು ಚರ್ಚಿಸಲಾಯಿತು. ಸದರಿ ಕಾಮಗಾರಿಯು 3ನೇ ಹಂತದಲ್ಲಿ ಸೇರಿರುವುದರಿಂದ ಯಾವ ಕ್ರಮ ಅನುಸರಿಸ ಬೇಕೆಂಬುದರ ಬಗ್ಗೆ ಮತ್ತೊಮ್ಮೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಲಾಯಿತು. |
| 14 | ಹಿಮ್ಸ್, ಕಾಲೇಜು ಕಟ್ಟಡಕ್ಕೆ ಮಳೆನೀರು ಸಂಗ್ರಹ (ಜಲ ಮರು ಪೂರಕ/ಮಳೆ ನೀರು ಸಂಗ್ರಹಣೆ) ವ್ಯವಸ್ಥೆ ಅಳವಡಿಸಿಕೊಳ್ಳುವ ಬಗ್ಗೆ. | ಸಂಸ್ಥೆಯು ಪ್ರಸ್ತುತ ಎದುರಿಸುತ್ತಿರುವ ಮತ್ತು ಭವಿಷ್ಯದಲ್ಲಿ ಎದುರಿಸಬೇಕಾದ ನೀರಿನ ಸಮಸ್ಯೆಯನ್ನು ಸಮರ್ಥವಾಗಿ ಪರಿಹರಿಸಿಕೊಳ್ಳುವ ದೃಷ್ಟಿಯಿಂದ ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ದೃಷ್ಟಿಯಿಂದ ನಿರ್ದೇಶಕರು, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರುರವರ ಸಹಕಾರ ಮಾರ್ಗದರ್ಶನ ಕೋರಲಾಗಿದ್ದು, ಸದರಿ ಸಂಸ್ಥೆಯವರು ಈ ಸಂಸ್ಥೆಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ ಸದರಿ ಕಾಮಗಾರಿಗೆ ರೂ.9,10,276.00ವೆಚ್ಚ ಭರಿಸಬೇಕಾಗುತ್ತದೆಂದು ಸಲ್ಲಿಸಿರುವ ಯೋಜನಾವರದಿಯನ್ನು ಆರ್ಥಿಕ ಸಮಿತಿ ಸಭೆಯ ಮುಂದೆ ಚರ್ಚಿಸಲಾಯಿತು. ಈ ಯೋಜನೆಯು ಅವಶ್ಯಕತೆ ಇರುವುದರಿಂದ ಸದರಿ ಕಾಮಗಾರಿಯ ವೆಚ್ಚಕ್ಕೆ ಒಪ್ಪಿ ಅಂಗೀಕರಿಸಲಾಯಿತು. |

T.N. Natraj
Finanee Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ .ಸಂಖ್ಯೆ | ವಿಷಯಗಳು | ತೀರ್ಮಾನ |
|---|---|---|
| 15 | ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಮಂಜೂರಾತಿ ಮತ್ತು ಅನುದಾನವನ್ನು ಪಡೆಯಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಅನುಮೋದನೆ ಪಡೆಯುವ ಬಗ್ಗೆ. | ಸಂಸ್ಥೆಯ ಅಗತ್ಯತೆಗೆ ಅನುಗುಣವಾಗಿ ವಿಭಾಗವಾರು ಕೆಲವೊಂದು ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ಮತ್ತು ಅಗತ್ಯ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಸದರಿ ವಿಷಯಗಳ ಅನುಮೋದನೆಗಾಗಿ ಆರ್ಥಿಕ ಸಮಿತಿ ಸಭೆಯ ಮುಂದೆ ಮಂಡಿಸಿ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಯಿತು. |
| 15(1) | ಶ್ರೀಚಾಮರಾಜೇಂದ್ರ ಆಸ್ಪತ್ರೆಯ ಮಕ್ಕಳ ವಾರ್ಡಿನ ಪಕ್ಕದಲ್ಲಿ ಶಿಶುಪೌಷ್ಟಿಕ ಪುನರ್ ವಸತಿ ಕೇಂದ್ರ ಸ್ಥಾಪಿಸುವ ಕಾಮಗಾರಿ | ಹಾಲಿ ಇರುವ ಮಕ್ಕಳ ವಾರ್ಡಿನ ಪಕ್ಕದ ಖಾಲಿ ಇರುವ ಸ್ಥಳದಲ್ಲಿ ಅಲ್ಯೂಮಿನಿಯಂ ಪಾರ್ಟಿಷನ್ ನಿಂದ ಶಿಶು ಪೌಷ್ಟಿಕ ಪುನರ್ ವಸತಿ ಕೇಂದ್ರ, ಅಡಿಗೆ ಮನೆ, ಸ್ಟೋರ್ ರೂಮ್ ನಿರ್ಮಿಸಲು ಉದ್ದೇಶಿಸಿದ್ದು, ಮೆಟ್ಟಿಲುಗಳ ಮುಂಭಾಗದ ಖಾಲಿ ಜಾಗದಲ್ಲಿ ಅಲ್ಯುಮಿನಿಯಂ ಕೊಠಡಿಯನ್ನು ನಿರ್ಮಿಸಿ ಅದರಲ್ಲಿ ಮಕ್ಕಳ ಆಟದ ಸಾಮಾನುಗಳನ್ನು ಒದಗಿಸಲು ಲೋಕೋಪಯೋಗಿ ಇಲಾಖೆಯಿಂದ ರೂ.4.95 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಪಡೆದು ದಿನಾಂಕ:19-01-2013ರಂದು ಆಡಳಿತಾತ್ಮಕ ಮಂಜೂರಾತಿ ಮತ್ತು ಅಗತ್ಯ ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಒಪ್ಪಿ ಅಂಗೀಕರಿಸಲಾಯಿತು. |
| 15(2) | ವಿಕಲ ಚೇನತರ ಹಾಗೂ ಹಿರಿಯ ನಾಗರೀಕ ಸಬಲೀಕರಣಕ್ಕಾಗಿ ಅಡೆತಡೆ ರಹಿತ ವಾತಾವರಣವನ್ನು ನಿರ್ಮಿಸುವ ಕೆಲಸ | ಎಲ್ಲಾ ಸರ್ಕಾರಿ ಪ್ರಮುಖ ಕಛೇರಿಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರದ ಎಸ್.ಐ.ಪಿ.ಡಿ.ಎ ಯೋಜನೆಯಡಿ ಅಡೆತಡೆ ರಹಿತ ವಾತಾವರಣವನ್ನು ನಿರ್ಮಿಸುವ ಸಲುವಾದ ರ್‍ಯಾಂಪ್ ನಿರ್ಮಾಣ (Ramp) ಕಾಮಗಾರಿಯ<br>Recurring Staff Salary : 4.10<br>Non Recurring a) Equipment :23.50<br>b) Civil Work : 9.30<br>c) Furniture : 1.00 |

T.N. Natarat
Finanee Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

| ಅಜೆಂಡಾ ಕ್ರ .ಸಂಖ್ಯೆ | ವಿಷಯಗಳು | ತೀರ್ಮಾನ |
|---|---|---|
| | | **ಒಟ್ಟು ಮೊತ್ತ: 37.90**<br>ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ಮತ್ತು ಅನುದಾನವನ್ನು ಬಿಡುಗಡೆ ಮಾಡಲು ದಿನಾಂಕ:05-01-2013ರಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಒಪ್ಪಿ ಅಂಗೀಕರಿಸಲಾಯಿತು. |
| 15(3) | 350 ರಿಂದ 750ಹಾಸಿಗೆಗಳ ನೂತನ ಕಟ್ಟಡ ಮತ್ತು ಕಾಲೇಜು ಕಟ್ಟಡದ ಮಧ್ಯೆ ಇರುವ ಎಲೆಕ್ಟ್ರಿಕಲ್ ಪೋಲ್ಸ್ ಸ್ಥಳಾಂತರಗೊಳಿಸುವ ಕಟ್ಟಡ | ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯನ್ನು 350-750 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ನೂತನ ಕಟ್ಟಡದ ನಿರ್ಮಾಣ ಕಾಮಗಾರಿಯು ಬಹುತೇಕ ಮುಗಿಯುವ ಹಂತದಲ್ಲಿರುತ್ತದೆ. ಹೊಸ ಆಸ್ಪತ್ರೆ ಕಟ್ಟಡ ಮತ್ತು ಕಾಲೇಜು ಕಟ್ಟಡದ ನಡುವೆ ಮಧ್ಯದಲ್ಲಿ ವಿದ್ಯುತ್ಚ್ಛಕ್ತಿ ಸ್ಥಾವರದ ಮೈನ್‌ಲೈನ್ ಇರುತ್ತದೆ. ಇದನ್ನು ಸ್ಥಳಾಂತರಗೊಳಿಸಲು ಸೆಸ್ಕಾಂ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಚರ್ಚಿಸಲಾಗಿ ವಿದ್ಯುತ್ಚ್ಛಕ್ತಿ ಸ್ಥಾವರದ ಮೈನ್‌ಲೈನ್ ಸ್ಥಳಾಂತಗೊಳಿಸಲು ಅಂದಾಜು ರೂ.7,55,076.00ಗಳ ವೆಚ್ಚ ತಗಲುವುದೆಂದು ವರದಿ ಸಲ್ಲಿಸಿರುತ್ತಾರೆ ಈ ವೆಚ್ಚವನ್ನು ಸಂಸ್ಥೆಯೇ ಭರಿಸಬೇಕಾಗಿರುವುದರಿಂದ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ಮತ್ತು ಅಗತ್ಯ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ದಿನಾಂಕ: 08-01-2013ರಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಒಪ್ಪಿ ಅಂಗೀಕರಿಸಲಾಯಿತು. |
| 15(4) | ಶ್ರೀ ಚಾಮರಾಜೇಂದ್ರ ಆಸ್ಪತ್ರೆ ಮತ್ತು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಚನ್ನಪಟ್ಟಣ ಕೆರೆಯ ಅಚ್ಚುಕಟ್ಟಿನಿಂದ ನೀರು ಸರಬರಾಜು ಮಾಡುವ ಕಾಮಗಾರಿ | ಶ್ರೀಚಾಮರಾಜೇಂದ್ರ ಆಸ್ಪತ್ರೆಗೆ ನಿತ್ಯ ಬಳಕೆಗೆ ಹಾಸನ ನಗರದ ನಗರ ಸಭೆಯಿಂದ ನೀರು ಸಮರ್ಪಕವಾಗಿ ಸರಬರಾಜಾಗದ ಕಾರಣದಿಂದ ನೀರಿನ ತೊಂದರೆ ಉಂಟಾಗಿದ್ದು ಆಸ್ಪತ್ರೆಯ ರೋಗಿಗಳಿಗೆ ಹಾಗೂ ಆಸ್ಪತ್ರೆಯ ಸಿಬ್ಬಂದಿಗಳಿಗೆ ಸಾಕಷ್ಟು ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಶಾಶ್ವತವಾಗಿ ನೀರಿನ ತೊಂದರೆ ನಿವಾರಿಸಲು ಹಾಸನದ ಚೆನ್ನಪಟ್ಟಣ ಕೆರೆಯ ಅಚ್ಚುಕಟ್ಟಿನಿಂದ ಕೊಳವೆಬಾವಿ ಮುಖಾಂತರ ನೀರು ಸರಬರಾಜು ಮಾಡುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಿಂದ ರೂ.30.00 ಲಕ್ಷಗಳಿಗೆ ಅಂದಾಜುಪಟ್ಟಿ ಪಡೆಯಲಾಗಿದೆ. ದಿನಾಂಕ:19-01-2013 ರಂದು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಅಗತ್ಯ |

T.V. Natara
Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ .ಸಂಖ್ಯೆ | ವಿಷಯಗಳು | ತೀರ್ಮಾನ |
|---|---|---|
| | | ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಒಪ್ಪಿ ಅಂಗೀಕರಿಸಲಾಯಿತು. |
| 15(5) | ವೈದ್ಯಶಾಸ್ತ್ರ ವಿಭಾಗಕ್ಕೆ 20 ರಿಂದ 25 ಆಸನಗಳುಳ್ಳ ಒಂದು ವಾಹನವನ್ನು ಖರೀದಿಸುವ ಬಗ್ಗೆ. | ಸಂಸ್ಥೆಯ ಸಮುದಾಯ ವೈದ್ಯಶಾಸ್ತ್ರ ವಿಭಾಗದ ಗೃಹ ವೈದ್ಯರಿಗಾಗಿ 24+1 ಆಸನಗಳನ್ನು ಹೊಂದಿರುವ ವಾಹವನ್ನು ಡಿ.ಜಿ.ಎಸ್.&ಡಿ ದರದಲ್ಲಿ ಖರೀದಿಸಲು ಅಗತ್ಯ ಅನುದಾನವನ್ನು ಬಿಡುಗಡೆಗಾಗಿ ದಿನಾಂಕ:02-11-2012ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 16 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು. | ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು. |

ಸದಸ್ಯ ಕಾರ್ಯದರ್ಶಿ, ಆರ್ಥಿಕ ಸಮಿತಿ,
ಹಾಗೂ ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.
Finanee Officer
Hassan Institute of Medical Sciences
HASSAN

ಸದಸ್ಯರು, ಆರ್ಥಿಕ ಸಮಿತಿ ಹಾಗೂ
ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.
ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಅಧ್ಯಕ್ಷರು, ಆರ್ಥಿಕ ಸಮಿತಿ, ಹಿಮ್ಸ್ ಹಾಗೂ
ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಧಾನ ಸೌಧ, ಬೆಂಗಳೂರು.